**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 20-01-2023</u>**
**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ.ಎನ್.ಪಿ. ವಕೀಲರಿಂದಃ</u>**

13. ಪ್ರತಿವಾದಿ 2 ರವರು ತನ್ನ ಸ್ವಂತ ಆದಾಯದಿಂದ ಹುಬ್ಬಳ್ಳಿಯಲ್ಲಿ ನಿವೇಶನವನ್ನು ದಿನಾಂಕ 06.03.1998 ರಲ್ಲಿ ಕಲ್ಯಾಣಮಠ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ನಾನು ನೋಡಿದ್ದೇನೆ. ಪ್ರತಿವಾದಿ 2 ರವರು ತನ್ನ ಸ್ವಂತ ಆದಾಯದಿಂದ ಹಾಗೂ ವಿಶ್ವ ಕಲ್ಯಾಣ ಸಹಕಾರಿ ಸಂಘದಿಂದ ಸಾಲವನ್ನು ಪಡೆದು ಸದರಿ ನಿವೇಶನದಲ್ಲಿ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸಾಕ್ಷಿಯು ನಾವು ನಮ್ಮ ಮನೆಯಿಂದ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಪೂರ್ತಿ ಹಣ ನಾವೇ ಕೊಟ್ಟಿದ್ದೇವೆ. ನಿವೇಶನ ಖರೀದಿಸಲು 1 ಲಕ್ಷ ಹಣ ಕೊಟ್ಟಿದ್ದೇವೆ ಹಾಗೂ ಮನೆಯನ್ನು ಕಟ್ಟಲು 30 ಲಕ್ಷ ಹಣ ಕೊಟ್ಟಿದ್ದೇವೆ. ಸದರಿ ಹಣ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ಸದರಿ ಮನೆಯನ್ನು ನಾನು ನೋಡಿದ್ದೇನೆ. ಸದರಿ ಮನೆ ಎರಡು ಮಹಡಿಗಳು ಇವೆ. 2001 ರಲ್ಲಿ ಕಟ್ಟಿಸಲಾಗಿದೆ. ಸದರಿ ಮನೆ ಕಟ್ಟಿಸಲು ನಮ್ಮ ಊರಿನಿಂದ ಕೂಲಿಕಾರರನ್ನು ಕಳಿಸಿದ್ದೇವು. ಕೂಲಿಕಾರರನ್ನು ಕಳುಹಿಸಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ಸದರಿ ಹಣ ಕೊಟ್ಟ ಬಗ್ಗೆ ಲೆಕ್ಕ ಇಡಲು ಏನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮ್ಮ ಒಟ್ಟು ಕುಟುಂಬದಿಂದ ಖರ್ಚು ಮಾಡಿದ್ದರಿಂದ ಅದರ ಬಗ್ಗೆ ಲೆಕ್ಕ ಇಟ್ಟಿಲ್ಲ ಎಂದು ಹೇಳುತ್ತಾರೆ. ಸದರಿ ಮನೆಯ ಉತಾರ ನಾನು ನೋಡಿದ್ದೇನೆ. ಸದರಿ ಮನೆಯ ಉತಾರದಲ್ಲಿ ಪ್ರತಿವಾದಿ 2 ರವರ ಹೆಸರು ಮಾಲೀಕರು ಹಾಗೂ ಕಬ್ಜೆದಾರರು ಎಂದು ದಾಖಲು ಆಗಿದೆ ಎಂದರೆ ನಿಜ. ಪ್ರತಿವಾದಿ 2 ರವರ ಹೆಸರಿನೊಂದಿಗೆ ನಮ್ಮ ಹೆಸರು ಸೇರಿಸಲು ನಾವು ಪ್ರಯತ್ನ ಮಾಡಿಲ್ಲ ಸಾಕ್ಷಿಯು ನಮ್ಮ

ತಂದೆ ಒಟ್ಟು ಕುಟುಂಬದ ಆಸ್ತಿಗಳನ್ನು ಪ್ರತಿವಾದಿ 2 ರವರ ಹೆಸರಿನಲ್ಲೇ ಖರೀದಿ ಮಾಡುತ್ತಿದ್ದರು ಆದ್ದರಿಂದ ನಮ್ಮ ಹೆಸರುಗಳನ್ನು ಸೇರಿಸಿರಲಿಲ್ಲ. ನಮ್ಮ ಹೆಸರಿನಲ್ಲಿ ಆಗಲೀ ನಮ್ಮ ತಂದೆಯ ಹೆಸರಿನಲ್ಲಿ ಆಗಲೀ ಆಸ್ತಿ ಖರೀದಿಸಲು ತೊಂದರೆ ಇರಲಿಲ್ಲ. ಹುಬ್ಬಳ್ಳಿಯಲ್ಲಿ ಖರೀದಿಸಿದ ನಿವೇಶನ ಹಾಗೂ ಅದರಲ್ಲಿ ಕಟ್ಟಿಸಿರುವ ಮನೆಯ ಖರ್ಚಿಗೆ ಒಟ್ಟು ಕುಟುಂಬದ ಆದಾಯ ಎಂದಿಗೂ ಸೇರಿಸಿಲ್ಲ ಪ್ರತಿವಾದಿ 2 ರವರ ಸ್ವಂತ ಆದಾಯದಿಂದ ನಿವೇಶನ ಖರೀದಿಸಿ ಕಟ್ಟಡ ಕಟ್ಟಿಸಲಾಗಿದೆ ಆದ್ದರಿಂದ ನಮಗೆ ಆಗಲೀ ನಮ್ಮ ತಂದೆಗೆ ಆಗಲೀ ಸದರಿ ಮನೆಯಲ್ಲಿ ಯಾವುದೇ ಅಧಿಕಾರ ಹಾಗೂ ಪಾಲು ಇಲ್ಲ ಎಂದರೆ ಸರಿಯಲ್ಲ.

14. ನಮ್ಮ ತಂದೆ ಬಾಳಪ್ಪಾ ಕಂಬಾರ ಹಾಗೂ ಪರಶುರಾಮ ಕಂಬಾರ ರವರ ಜಮೀನುಗಳನ್ನು ಲಾವನಿ ಮಾಡಿ ಸುಮಾರು 400 ರಿಂದ 500 ಟನ್ ಕಬ್ಬು ಬೆಳೆಸುತ್ತಿದ್ದರು ಎಂದು ತೋರಿಸಲು ದಾಖಲೆಗಳು ನಮ್ಮ ಅಣ್ಣ ಪ್ರತಿವಾದಿ 2 ರವರ ಹೆಸರಿನಲ್ಲಿ ಇವೆ ಹಾಗೂ ಸದರಿ ದಾಖಲೆಗಳು ಪ್ರತಿವಾದಿ 2 ರವರ ಬಳಿ ಇವೆ. ಯಾವ ಕಾರ್ಖಾನೆಗೆ ಕಬ್ಬು ಬಳೆ ಕಳುಹಿಸಲಾಗುತ್ತದೆ ಅದರಲ್ಲಿ ಬೆಳೆ ಯಾವ ಸರ್ವೆ ನಂಬರ ಜಮೀನಿಗೆ ಸಂಬಂಧ ಪಟ್ಟಿದೆ ಹಾಗೂ ಯಾರು ಮಾಲೀಕರು ಮತ್ತು ಬೆಳೆಯನ್ನು ಯಾರು ಕಳುಹಿಸುತ್ತಾರೆ ಅವರ ಹೆಸರು, ಚಾಲಕನ ಹೆಸರು ಸದರಿ ರಸೀದಿಗಳ ಮೇಲೆ ಬರೆಯಲಾಗುತ್ತದೆ ಎಂದರೆ ನಿಜ. 1995 ರಿಂದ 2010 ರವರೆಗೆ ಕಾರ್ಖಾಹಾನೆಗೆ ಕಬ್ಬು ಬೆಳೆಯನ್ನು ಕಳುಹಿಸಲಾಗಿದೆ. ಕಬ್ಬು ಬೆಳೆಯನ್ನು ಖಾನಾಪೂರ, ಎಂ ಕೆ ಹುಬ್ಬಳ್ಳಿ ಮತ್ತು ಬೈಲಹೊಂಗಲ ಹಾಗೂ ಕೆಲವು ಮಹಾರಾಷ್ಟ್ರದಲ್ಲಿ ಇರುವ ಕಾರ್ಖಾನೆಗಳಿಗೆ, ಹಳಿಯಾಳ ಕಾರ್ಖಾನೆಗಳಿಗೆ ಕಳುಹಿಸಲಾಗಿದೆ. ನಾನು ದಾಖಲೆಗಳು ಇಲ್ಲದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಒಟ್ಟು

ಕುಟುಂಬಕ್ಕೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರ ಆಸ್ತಿಗಳಿಗಂದ ಕಬ್ಜೆಯನ್ನು ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪ್ರತಿವಾದಿ 2 ರವರ ಹೆಂಡತಿ 18 ವರ್ಷಗಳ ಕಾಲ ಶಿಕ್ಷಕಿಯಾಗಿ ನೌಕರಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅಷ್ಟು ವರ್ಷ ಮಾಡಿಲ್ಲ ಎಂದು ಹೇಳುತ್ತಾರೆ. ಕೇವಲ 8 ವರ್ಷ ಕೆಲಸ ಮಾಡಿದ್ದಾರೆ ಎಂದು ಹೇಳುತ್ತಾರೆ. ಕೇವಲ 8 ವರ್ಷ ಕೆಲಸ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪ್ರತಿವಾದಿ 2 ರವರ ಹೆಂಡತಿಗೆ ತಿಂಗಳಿಗೆ ರೂ.25,000/- ಪಗಾರ ಇತ್ತು ಎಂದರೆ ಸಾಕ್ಷಿಯು ಕೇವಲ ರೂ.4,000/- ತಿಂಗಳ ಪಗಾರ ಇತ್ತು ಎಂದು ಹೇಳುತ್ತಾರೆ. ನಾನು ಪ್ರತಿವಾದಿ 2 ರವರ ಹೆಂಡತಿಯ ವೇತನ ಪ್ರಮಾಣ ಪತ್ರ ನೋಡಿದ್ದೇನೆ. ನಾನು ಮನೆಯಲ್ಲಿ ಅವರು ಪಗಾರವನ್ನು ತೆಗೆದುಕೊಂಡು ಬಂದಾಗ ನೋಡಿದ್ದೇನೆ. ಪ್ರತಿವಾದಿ 2 ರವರ ಹೆಂಡತಿಗೆ ತಿಂಗಳಿಗೆ ರೂ.4,000/- ಪಗಾರ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 2 ರವರು 1978 ರಲ್ಲಿ ಹುಬ್ಬಳ್ಳಿಗೆ ಹೋಗಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ಹುಬ್ಬಳ್ಳಿಯಲ್ಲಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡಿ ತನ್ನ ಮುಂದಿನ ಶಿಕ್ಷಣ ಮುಗಿಸಿ ಎಂ.ಕಾಂ. ಪದವಿ ಪಡೆದ್ದೀದ್ದಾರೆ ಎಂದರೆ ಸಾಕ್ಷಿಯು ನಮ್ಮ ತಂದೆ ಹಾಗೂ ನಾವು ಅವರನ್ನು ಓದಿಸಿದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿ 2 ರವರು ಹುಬ್ಬಳ್ಳಿಯಲ್ಲಿ ಆದಾಯ ತೆರಿಗೆ ರಿರ್ಟನ್ಸ ಮತ್ತು ಬೇರೆ ಸಂಸ್ಥೆಗಳ ಅಕೌಂಟ್ಸ ಗಳನ್ನು ನೋಡುತ್ತಿದ್ದರು ಹಾಗೂ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಎಂದಿಗೂ ಕೆಲಸ ಮಾಡಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ 2 ರವರು ಹಣದ ಲೇವಾದೆವಿ ವ್ಯವಹಾರ ಸಹ ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು

ಹಣದ ಲೇವಾದೆವಿ ವ್ಯವಹಾರ ಮಾಡುವುದಿಲ್ಲ ಹಾಗೂ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪ್ರತಿವಾದಿ 2 ರವರ ಹೆಸರಿನಲ್ಲಿರುವ ಆಸ್ತಿಗಳು ಅವರ ಸ್ವಯಾರ್ಜೀತ ಆಸ್ತಿಗಳು ಅದರಲ್ಲಿ ನಮ್ಮ ಕುಟುಂಬದ ಬೇರೆ ಯಾವ ಸದಸ್ಯರಿಗೂ ಹಕ್ಕು ಪಾಲು ಇಲ್ಲ ಎಂದರೆ ಸರಿಯಲ್ಲ.

15. ಸರ್ವೆ ನಂ.44/2 ರ ಉತಾರ ನೋಡಿದ್ದೇನೆ. ಪ್ರತಿವಾದಿ 2 ರವರ ಹೆಸರಿನಲ್ಲಿ ಸದರಿ ದಾಖಲೆ ಇದೆ ಎಂದರೆ ನಿಜ. ಉತಾರದಲ್ಲಿ ಕಬ್ಜೆ ಮತ್ತು ಮಾಲೀಕರು ಯಾರು ಇರುತ್ತಾರೆ ಅವರ ಹೆಸರು ದಾಖಲು ಆಗುತ್ತದೆ ಎಂದರೆ ಸಾಕ್ಷಿಯು ಕಬ್ಜೆಯಲ್ಲಿ ನಾನು ಇದ್ದೇನೆ ಆದರೆ ಅವರ ಹೆಸರು ಉತಾರದಲ್ಲಿ ಬರುತ್ತಿದೆ ಎಂದು ಹೇಳುತ್ತಾರೆ. ಪ್ರತಿವಾದಿ 2 ರವರು ಖರೀದಿಸಿದ ಎಲ್ಲಾ ಆಸ್ತಿಗಳಲ್ಲಿ ಅವರ ಹೆಸರು ಮಾಲೀಕರು ಮತ್ತು ಕಬ್ಜೆದಾರರು ಎಂದು ದಾಖಲು ಆಗಿದೆ ಎಂದರೆ ಸಾಕ್ಷಿಯು ಆಗಿದೆ ಎಂದು ಒಪ್ಪಿ ಕೊಂಡು ಆದರೆ ನಾವು ಎಲ್ಲರೂ ಕಬ್ಜೆಯಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿ 2 ರವರ ಹೆಸರಿನಲ್ಲಿ ಇರುವ ಎಲ್ಲಾ ಜಮೀನುಗಳಿಂದ ಪ್ರತಿವಾದಿ 2 ರವರು ಬೆಳೆ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿಯು ನಾವು ಎಲ್ಲರೂ ಕೂಡಿಕೊಂಡು ಬೆಳೆ ಸಾಲ ಪಡೆದಿದ್ದೇವೆ ಎಂದು ಹೇಳುತ್ತಾರೆ. ನಾವು ಎಲ್ಲರೂ ಕೂಡಿಕೊಂಡು ಬೆಳೆ ಸಾಲ ಪಡೆದಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಸರ್ವೆ ನಂ.82/1 ಎ, 82/2 ಮತ್ತು 82/3 ಗಳಲ್ಲಿ ಪ್ರತಿವಾದಿ 2 ರವರು ಕೊಳವೆಬಾವಿ ತೆಗೆಯಿಸಿದ್ದಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿಕೊಂಡು ಹಾಕಿಸಿದ್ದೇವೆ ಎಂದು ಹೇಳುತ್ತಾರೆ. ಎಲ್ಲರೂ ಕೂಡಿಕೊಂಡು ಕೊಳೆಬಾವಿ ಹಾಕಿಸಿದ್ದೇವೆ ಎಂದು ತೋರಿಸಲು ದಾಖಲೆ ಇಲ್ಲ. ಯಾರು ಕೊಳವೆಬಾವಿ ಹಾಕಿಸಿದ್ದಾರೆ ಅವರ ಹೆಸರಿನಲ್ಲಿ ರಸೀದಿ

ಇರುತ್ತದೆ ಎಂದರೆ ಸಾಕ್ಷಿಯು ನಾವು ಎಲ್ಲಾ ರಸೀದಿಗಳನ್ನು ಪ್ರತಿವಾದಿ 2 ನಮ್ಮ ಅಣ್ಣನ ಹೆಸರಿನಲ್ಲಿ ಹಾಕಿಸಿದ್ದೇವೆ ಎಂದು ಹೇಳುತ್ತಾರೆ. ನಾನು ಪ್ರತಿವಾದಿ 2 ರವರು ಹಾಜರು ಮಾಡಿರುವ ದಾಖಲೆಗಳನ್ನು ನೋಡಿದ್ದೇನೆ. ಕೊಳವೆಬಾವಿಗಳಿಗೆ ಅಳವಡಿಸಲಾದ ವಿದ್ಯುಚ್ಛಕ್ತಿ ಪೂರೈಕೆ ಸಂಬಂಧ ದಾಖಲೆಗಳು ಪ್ರತಿವಾದಿ 2 ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನಾವು ನಮ್ಮ ಅಣ್ಣ ಪ್ರತಿವಾದಿ 2 ರವರ ಹೆಸರಿನಲ್ಲೇ ರಸೀದಿಗಳನ್ನು ಪಡೆಯುತ್ತಿದ್ದೇವು ಎಂದು ಹೇಳುತ್ತಾರೆ. ಕಬ್ಬು ಬೆಳೆ ಬೆಳೆಯಿಸಿದ ವ್ಯಕ್ತಿಯ ಹೆಸರಿನಲ್ಲಿ ಕಾರ್ಖಾನೆಗಳು ರಸೀದಿಗಳನ್ನು ಕೊಡುತ್ತಾರೆ ಎಂದರೆ ಸಾಕ್ಷಿಯು ನಾವು ನಮ್ಮ ಅಣ್ಣ ಪ್ರತಿವಾದಿ 2 ರವರ ಹೆಸರಿನಲ್ಲೇ ರಸೀದಿಗಳನ್ನು ಪಡೆಯುತ್ತಿದ್ದೇವು ಎಂದು ಹೇಳುತ್ತಾರೆ. ನಾವು ಎಂದಿಗೂ ಬೆಳೆಯನ್ನು ಬೆಳೆದಿರಲಿಲ್ಲ ಕಾರ್ಖಾನೆಗಳಿಗೆ ಸದರಿ ಬೆಳೆ ರವಾನಿಸಿರಲಿಲ್ಲ ಹಾಗೂ ನಮ್ಮ ಸ್ವಾಧೀನದಲ್ಲಿ ಸದರಿ ಜಮೀನುಗಳು ಇರಲಿಲ್ಲ ಎಂದರೆ ಸರಿಯಲ್ಲ.

16. ದಿನಾಂಕ 19.04.2013 ರಲ್ಲಿ ಪ್ರತಿವಾದಿ 2 ರವರ ಕಬ್ಜೆಯಲ್ಲಿರುವ ಸರ್ವೆ ನಂ.82/1 ಎ, 82/2 ಮತ್ತು 82/3 ಗಳಲ್ಲಿ ಕಾನೂನು ಬಾಹಿರವಾಗಿ ಕಬ್ಜೆಯನ್ನು ಪಡೆಯಲು ಪ್ರಯತ್ನ ಮಾಡಿದ್ದೇವೆ ಎಂದರೆ ಸರಿಯಲ್ಲ ಸಾಕ್ಷಿಯು ನಾವೇ ಕಬ್ಜೆಯಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿ 2 ರವರು ನಮ್ಮ ವಿರುದ್ಧ ದೂರು ದಾಖಲು ಮಾಡಿದ್ದರು ನಾವು ಸಹ ಅವರ ವಿರುದ್ಧ ದೂರು ದಾಖಲು ಮಾಡಿದ್ದೇವೆ. ನಂತರ ನಾವು ಒಳ ಕಬ್ಜೆಗೆ ತೊಂದರೆ ಕೊಟ್ಟಿದ್ದರಿಂದ ಅವರು ನಮ್ಮ ವಿರುದ್ಧ ಪ್ರತಿಬಂಧಕಾಜ್ಞೆ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಾವು ತೊಂದರೆ ಕೊಟ್ಟಿಲ್ಲ ನಮಗೆ ಗೋತ್ತಿಲ್ಲದೆ ಪ್ರತಿವಾದಿ 2 ದಾವೆ ಹಾಕಿದ್ದಾರೆ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ನನ್ನ ವಿರುದ್ಧ ಪ್ರತಿಬಂಧಕಾಜ್ಞೆ

ಆದೇಶ ಹೊರಡಿಸಲಾಗಿದೆ ಇನ್ನುವರೆಗೆ ಅದು ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ದಾವೆಯ ಆದೇಶವನ್ನು ಪ್ರಶ್ನಿಸಿ ಅಪೀಲು ಸಲ್ಲಿಸಲಾಗಿತ್ತು ಎಂದರೆ ನಿಜ. ಸದರಿ ಅಪೀಲು ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪೀಲಿನ ಬಗ್ಗೆ ವಿಚಾರಣೆ ಮಾಡಿದ್ದೇನೆ. ಸದರಿ ಅಪೀಲು ಸಂಖ್ಯೆ ನೆನಪಿಲ್ಲ. ನನಗೆ ಸದರಿ ಅಪೀಲಿನ ಮಾಹಿತಿ ಇದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪೀಲು ವರ್ಗಾವಣೆ ಮಾಡಲು ಗೌರವಾನ್ವಿತ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ ಎಂದರೆ ನಿಜ. ಸದರಿ ವರ್ಗಾವಣೆ ಅರ್ಜಿ ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ವರ್ಗಾವಣೆ ಅರ್ಜಿ ವಜಾ ಆದ ನಂತರ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಸದರಿ ಆದೇಶ ನಾವು ಪ್ರಶ್ನಿಸಿದ್ದೇವೆ ಎಂದರೆ ನಿಜ. ಸದರಿ ಗೌರವಾನ್ವಿತ ಉಚ್ಚನ್ಯಾಯಾಲಯ ಸಹ ನಾವು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯಲ್ಲಿ ಆದೇಶ ಮಾಡಿ ನಮ್ಮ ಅರ್ಜಿ ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿ ವಿಚಾರ ನಾನು ನಮ್ಮ ವಕೀಲರೊಂದಿಗೆ ಮಾಡಿಲ್ಲ. ನನಗೆ ಸದರಿ ವರ್ಗಾವಣೆ ಅರ್ಜಿಯ ಎಲ್ಲಾ ಮಾಹಿತಿ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

**( ಈ ಮೇಲಿನ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**